ಆ) ಇಲ್ಲಿ ಇತ್ತೀಚೆಗೆ ಅಕ್ರಮವಾಗಿ ಕೇರಳಕ್ಕೆ ಸಾಗಾಣಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) ಬಂದದ್ದಲ್ಲಿ, ಏನು ಕ್ರಮ ಕೈಗೊಳ್ಳಲಾಗಿದೆ:

ಈ) ವಿರಾಜಪೇಟೆ ತಾಲ್ಲೂಕಿನಲ್ಲಿ ಸರ್ಕಾರ ನಿಗದಿಪಡಿಸಿದ ಅಂಗಡಿಗಳಿಗಿಂತ ಹೆಚ್ಚಿನ ಸಾರಾಯಿ ಅಂಗಡಿಗಳು ಅಕ್ರಮವಾಗಿ ತಲೆ ಎತ್ತಿರುವುದು ನಿಜವೇ:

ಉ) ಹಾಗಿದ್ದಲ್ಲಿ, ಇವುಗಳ ನಿಯಂತ್ರಣಕ್ಕೆ ಸರ್ಕಾರ ಯಾವ ಕ್ರಮಗಳನ್ನು ಕೈಗೆತ್ತಿಗೊಳ್ಳುವುದು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಬಂದಿರುತ್ತದೆ.

ಆ) ಬಂದಿರುತ್ತದೆ.

ಇ) ಕೇರಳ ರಸ್ತೆಯ ಪರಂಬಾಕ್ ಚಿಡಿಪೋಸ್ಟ್‌ನಲ್ಲಿ ವೀರಾಜಪೇಟೆ ತಾಲ್ಲೂಕಿನ ಆನೆಚೌರೂರು ಗೇಟ್, ಮಾಲ್ದಾರ್ ಮತ್ತು ಕೊಪ್ಪ ಗೇಟ್‌ಗಳಲ್ಲಿ ಹಗಲು ರಾತ್ರಿ ವಾಹನ ತಪಾಸಣೆ ನಡೆಸಲಾಗುತ್ತಿದೆ ಹಾಗೂ ಅಕ್ರಮ ಸಾಗಾಣಿಕೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಈ ಕ್ರಮದಿಂದ ಕಳೆದ ವರ್ಷದಿಂದ 13 ವಾಹನಗಳು ಮತ್ತು 22,695 ಲೀಟರ್ ಮದ್ಯಸಾರವನ್ನು ಜಪ್ತು ಮಾಡಲಾಗಿದೆ.

ಈ) ಹೌದು

ಉ) ಕ್ರಮಬದ್ಧವಾಗಿ ದಾಳಿ ನಡೆಸಿ ಅಕ್ರಮ ಸಾರಾಯಿ ಅಂಗಡಿಗಳು ತಲೆ ಎತ್ತದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

34(863) ಶ್ರೀ ಬಸವರಾಜು ಹೆಚ್.ಡಿ. (ವೀರಾಜಪೇಟೆ) : ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕಿನಲ್ಲಿ ಈ ಹಿಂದೆ ಪ್ರವಾಸೋದ್ಯಮ ಇಲಾಖೆ ವತಿಯಿಂದ ಬಾಳಗೋಡು ಎಂಬಲ್ಲಿ ರೆಸಾರ್ಟ್ಸ್ ಪ್ರಾರಂಭಿಸಲು ಹಣ ವೆಚ್ಚ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಸ್ಥಳವು ಅರಣ್ಯ ಇಲಾಖೆಯದ್ದೆ ಅಥವಾ ಕಂದಾಯ ಇಲಾಖೆಯದ್ದೆ;

ಇ) ಈ ಯೋಜನೆಯಡಿಯಲ್ಲಿ ಈಗಾಗಲೇ ಸರ್ಕಾರ ಖರ್ಚು ಮಾಡಿರುವ ಹಣ ಎಷ್ಟು;

ಈ) ಇದರಿಂದ ಸರ್ಕಾರಕ್ಕೆ ಯಾವ ರೀತಿಯ ಲಾಭ ಇದೆ?

ಶ್ರೀ ಡಿ.ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು) :

ಅ) ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನ ಬಾಳಗೋಡು ಎಂಬಲ್ಲಿ ತಾತ್ಕಾಲಿಕ ಟೆಂಟೆಂಡ್ ಕ್ಯಾರವನ್ನು ಪ್ರವಾಸೋದ್ಯಮ ಇಲಾಖೆಯಿಂದ ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿತ್ತು.

ಆ) ಈ ಸ್ಥಳವನ್ನು ಕಂದಾಯ ಇಲಾಖೆಯಿಂದ ಪಡೆಯಲಾಗಿತ್ತು.

ಇ) ಸರ್ಕಾರವು ಈ ಯೋಜನೆಗೆ 1993ರಲ್ಲಿ ರೂ. 40.54 ಲಕ್ಷಗಳನ್ನು ವೆಚ್ಚ ಮಾಡಿತ್ತು. ಈ ಯೋಜನೆಯ ಟೆಂಟೆಡ್ ಅಕಾಮಡೇಶನ್ ತಾತ್ಕಾಲಿಕ ಯೋಜನೆಯಾಗಿದ್ದು ಈ ಯೋಜನೆ ಮುಕ್ತಾಯವಾದ ನಂತರ ಉಪಕರಣಗಳನ್ನು ಮೆ: ಜಂಗಲ್ ಲಾಡ್ಜಸ್, ಮತ್ತು ರೆಸಾರ್ಟ್ಸ್ ಸಂಸ್ಥೆ ಹಾಗೂ ಕೆ.ಎಸ್.ಟಿ.ಡಿ.ಸಿ ರವರಿಗೆ ಹಸ್ತಾಂತರಿಸಲಾಯಿತು.

ಈ) ಹೆಚ್ಚಿನ ಸಂಖ್ಯೆಯಲ್ಲಿ ದೇಶಿಯ ಹಾಗೂ ವಿದೇಶಿಯ ಪ್ರವಾಸಿಗರನ್ನು ಆಕರ್ಷಿಸುವ ಪ್ರಯತ್ನವಾಗಿತ್ತು.